**ಪ್ರ ದ ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ**

**ಸಿ ಸಿ ನಂಃ 1709/2023**

ಸಾಕ್ಷಿಯ ಹೆಸರುಃ ಗೀತಾ ಹೆಚ್.ಟಿ ಪ್ರಾಸಾಃ7

ತಂದೆ /ಗಂಡನ ಹೆಸರು ಃ ಚಂದ್ರಯ್ಯ ಚಾಸಾಃ24

ವಯಸ್ಸು ಃ 49 ವರ್ಷ,

ಉದ್ಯೋಗ ಃ ಎಸ್.ಐ

ವಾಸ ಸ್ಥಳ ಃ ಕುಶಾಲನಗರ

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ01.02.2025**

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ನಾನು **14.02.2022** ರಿಂದ **17.08.2023** ರವರೆಗೆ ಕುಶಾಲನಗರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪೋಲಿಸ್ ಸಬ್ ಇನ್ಸಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **15.06.2023** ರಂದು ಸಮಯ ರಾತ್ರಿ **8.00** ಗಂಟೆಗೆಗ ನಗರದಲ್ಲಿ ಗಸ್ತಿನಲ್ಲಿರುವಾಗ ಠಾಣೆಯಿಂದ ನನಗೆ ಕರೆ ಮಾಡಿ ಕುಶಾಲನಗರ ರಾಯಲ್ ಎನ್ ಫಿಲ್ಡ್ ಶೋರೂಮ್ ಎದುರು ರಸ್ತೆ ಅಪಘಾತವಾಗಿರುತ್ತದೆ ಎಂದು ನೀಡಿದ ಮಾಹಿತಿ ಮೇರೆಗೆ ಕೂಡಲೆ ಸ್ಥಳಕ್ಕೆ ತೆರಳಿ ರಸ್ತೆ ಕೆ ಎ **12** ಅರ್ **4588** ಸ್ಕೂಟಿ ಹಾಗೂ ಕೆ ಎ **45** ಇ ಬಿ **6493** ಯ ಬುಲೆಟ್ ಬೈಕನ್ನು ಭಾವಚಿತ್ರ ತೆಗೆದ ಒಂದು ಗೂಡ್ಸ ವಾಹನದಲ್ಲಿ ಠಾಣೆಗೆ ಕಳುಹಿಸಿ ಠಾಣಾ ಆವರಣದಲ್ಲಿ ನಿಲ್ಲಿಸಿರುತ್ತೇನೆ . ನಂತರ ದಿಃ **16.06.2023** ರಂದು ಚಾಸಾ **25** ರವರು ಅಪಘಾತದಲ್ಲಿ ಮೃತಪಟ್ಟ ಮೃತೆ ಭಾವನರವರ ಮೃತ ದೇಹದ ಮೇಲೆ ಶವಪಂಚನಾಮೆಯನ್ನು ನಡೆಸಿ ವರದಿ ಮಾಡ ಬೇಕೆಂದು ನೀಡಿದ ಜ್ಞಾಪನವನ್ನು ಸ್ವೀಕರಿಸಿಕೊಂಡು ಕುಶಾಲನಗರ ಸರಕಾರಿ ಆಸ್ಪತ್ರೆಯ ಶವಗಾರಕ್ಕೆ ತೆರಳಿ ಶವ ಪಹರೆ ಬಗ್ಗೆ ಚಾಸಾ **18** ರವರನ್ನು ನೇಮಕ ಮಾಡಿಕೊಂಡು ಫಾರಂ ನಂ **144** ರಲ್ಲಿ ಶವಪಂಚನಾಮೆಗೆ ಪಂಚರಾದ ಚಾಸಾ **6,** ಚಾಸಾ **7, 8** ಇವರನ್ನು ಪಂಚರಾಗಿ ಬರಮಾರಡಿಕೊಂಡು ಪಂಚರ

ಸಮಕ್ಷಮ ಕಲಂ **9** ರಲ್ಲಿ ಮೃತಳ ಶವಪಂಚನಾಮೆ ಕಾಲಂ **9** ರಲ್ಲಿ ರಕ್ತ ಶವಗಾರರಾದ ಚಾಸಾ **4** ರವರ ಹೇಳಿಕೆಯನ್ನು ಪಡೆದಿರುತ್ತೇನೆ **.** ಕಾಲಂ ನಂ **10** ರಲ್ಲಿ ಚಾಸಾ **9** ಮತ್ತು **10** ರವರ ಹೇಳಿಕೆ ಪಡೆದಿರುತ್ತೇನೆ **.** ಶವಪಂಚನಾಮೆಯನ್ನು ಬೆಳಗ್ಗೆ **6.30** ರಿಂದ **8.30** ಗಂಟೆಯೊಳಗೆ ತಯಾರಿಸಲಾಯಿುತು. ನಂತರ ಮೃತ ದೇಹವನ್ನು ಮರಣೋತ್ತರ ಪರೀಕ್ಷೆಗೆ ಹಾಜರುಪಡಿಸಲು ಫಾರಂ ನಂ **146 , 192** ಭರ್ತಿ ಮಾಡಿ ವೈದ್ಯಾದಿಕಾರಿಗಳಿಗೆ ಹಾಜರುಪಡಿಸಲು ಚಾಸಾ **18** ರವರರೊಂದಿಗೆ ಕಳುಹಿಸಿಕೊಟ್ಟಿರುತ್ತೇನೆ **.** ನಂತರ ಮೃತ ದೇಹವನ್ನು ಭಾವಚಿತ್ರವನ್ನು ಚಾಸಾ **10** ರ ಬಳಿ ಭಾವಚಿತ್ರವನ್ನು ತೆಗೆಸಿ ಅದಕ್ಕೆ ಸಂಬಂಧಿಸಿದಂತೆ ಭಾರತೀಯ ಸಾಕ್ಷ್ಯ ಅಧಿನಿಯಕಲಂ **65** ಬಿ ಅಡಿಯಲ್ಲಿ ದೃಡೀಕರಣವನ್ನು ಹೊಂದಿಕೊಂಡಿರುತ್ತೇನೆ **.** ನಂತರ ಮರಣೋತ್ತರ ಪರೀಕ್ಷೆಯನ್ನು ಚಾಸಾ **18** ರವರು ಮೃತಳ ರಕ್ತ ಸಂಬಂಧಿಗಳಿಗೆ ರಶೀದಿ ಮೂಲಕ ಬಿಟ್ಟು ಕೊಟ್ಟು ರಶೀದಿಯೊಂದಿಗೆ ವರದಿ ಮಾಡಿರುತ್ತಾರೆ **.** ನಂತರ ಶವಪಂಚನಾಮ ವರದಿಯನ್ನು ಚಾಸಾ **25** ರವರಿಗೆ ಒಪ್ಪಿಸಿರುತ್ತೇನೆ **.** ನಂತರ ದಿಃ **23.06.2023** ರಂದು ಚಾಸಾ **25** ರವರು ಅಪಘಾತಕಳ್ಳಪಟ್ಟ **2** ವಾಹನವನ್ನು ನಾನು ಗುರುತಿಸಿ ಸ್ವತ್ತು ಅಮಾನತ್ತು ಮಹಜರ ಕಾಲದಲ್ಲಿ ನಾನು ತೋರಿಸಿಕೊಟ್ಟಿರುತ್ತೇನೆ ಹಾಗೂ ಸದರಿ ಮಹಜರಗೆ ನಾನು ಸಹಿ ಮಾಡಿರುತ್ತೇನೆ **.**

ಸಾಕ್ಷಿಯು ಸ್ವತ್ತು ಅಮಾನತ್ತು ಮಹಜರನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಅದು ಈಗಾಗಲೇ ನಿಪಿ 3 ಎಂದು ಗುರುತಿಸಲಾದ್ದು, ಸಾಕ್ಷಿಯ ಸಹಿಯನ್ನು ನಿಪಿ 3 ಡಿ ಎಂದು, ಶವಪಂಚನಾಮೆಯನ್ನು ನಿಪಿ 5 ಎಂದು, ಸಾಕ್ಷಿ ಸಹಿಯನ್ನು ನಿಪಿ 5 ಎ ಎಂದು ಗುರುತಿಸಲಾಯಿುತು.

ಪಾಟೀ ಸವಾಲುಃ ಶ್ರೀ ಹೆಚ್ ಸಿ ಎಂ ಕೆ ವಕೀಲರಿಂದ **2** ನೇ ಆರೋಪಿ ಪರ

ಯಾವುದೆ ಅಪಘಾತ ಸಮಯದಲ್ಲಿ ವಾಹನಗಳನ್ನು ಇಲಾಖಾ ಸುಪರ್ದಿಗೆ ತೆಗೆದುಕೊಳ್ಳಲು ಮಹಜರ ಕ್ರಮ ಜರುಗಿಸಬೇಕು ಎಂದರೆ ಸಾಕ್ಷಿ ಸುಗಮ ಸಂಚಾರಕ್ಕೆ ವಾಹನಗಳನ್ನು ನಮ್ಮ ಸುಪರ್ದಿಗೆ ತೆಗೆದುಕೊಳ್ಳಬಹುದು ಎನ್ನುವರು. ಈ ಪ್ರಕರಣದಲ್ಲಿ ವಾಹನಗಳನ್ನು ಪೋಲಿಸ್ ಠಾಣೆಗೆ ತೆಗೆದುಕೊಂಡು ಹೋಗಲು ಮಹಜರ ಅವಶ್ಯಕತೆ ಇರಲಿಲ್ಲ. ನಿಪಿ **3** ರಲ್ಲಿ ತೋರಿಸಿರುವ ವಾಹನಗಳನ್ನು ಇಂತಹದ್ದೆ ಸ್ಥಳದಿಂದ ಪೋಲಿಸರ್ ಠಾಣೆಗೆ ಹಾಜರುಪಡಿಸಿರುವ ಬಗ್ಗೆ ಯಾವುದೆ ದಾಖಲೆಗಳನ್ನು ಇಲ್ಲ ಎಂದರೆ ಸರಿಯಲ್ಲ. ಅಪಘಾತ ಸ್ಥಳದಿಂದ ನಾವು ಯಾವುದೆ ವಾಹನವನ್ನು ಪೋಲಿಸ್ ಠಾಣೆಗೆ ತೆಗೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. **2** ನೇ ಆರೋಪಿಗೆ ಸಂಬಂಧಿಸಿದ ವಾಹನಕ್ಕೂ ಈ ಅಪಘಾತಕ್ಕೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. **2** ನೇ ಆರೋಪಿಯ ಬೈಕನ್ನು ಘಟನಾ ಸ್ಥಳದಿಂದ ನಾವು ತೆಗೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ವಾಹನಗಳನ್ನು ಸ್ಥಳದಿಂದ ಖಾಸಗಿ ವಾಹನದಲ್ಲಿ ಹಸ್ತಾಂತರಿಸಿರುವ ಬಗ್ಗೆ ಯಾವುದೆ ರಶೀದಿಯನ್ನು ಹಾಜರುಪಡಿಸಿರುವುದಿಲ್ಲ. ನಿಪಿ **3** ರ ಮೂಲಕ ನನ್ನಂದ ಯಾುವುದೆ ವಾಹನವನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮೃತರ ಕುಟುಂಬಕ್ಕೆ ಸಹಾಯವಾಗಲೆಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ ಹೆಚ್ ಆರ್ ಜೆ ವಕೀಲರು **1** ನೇ ಆರೋಪಿಯ ಪರ ಮೇಲಿನ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ .

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ.